**CW : 2**
PW : 7

**1**ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.3726/2018

ಸಾಕ್ಷಿದಾರರ ಹೆಸರು : ಶ್ರೀಮತಿ ಶಾರದಾ

ಗಂಡನ ಹೆಸರು : ಗಣಪ್ಪಯ್ಯ

ಪ್ರಾಯ : 79 ವರ್ಷ

ಉದ್ಯೋಗ ಗೃಹಿಣಿ

ವಾಸಸ್ಥಳ : ಕೌಡಿಚ್ಚಾರ

ದಿನಾಂಕ:**11.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾಸಾ1 ನನ್ನ ಗಂಡ. ಕೌಡಿಚ್ಚಾರಿನಲ್ಲಿ ನಮಗೆ ಸೇರಿದ ಮನೆ ಇದೆ. ಮನೆ ನನ್ನ ಗಂಡನ ಹೆಸರಿನಲ್ಲಿದೆ. 2009 ರಲ್ಲಿ ನಾವು ಪುತ್ತೂರಿನ ಪೇಟೆಗೆ ಬಂದಿದ್ದಾಗ ನಮ್ಮ ಮನೆಯಲ್ಲಿ ಕಳ್ಳತನ ಆಗಿತ್ತು. ನಾವು ಸಂ.6.00 ಗಂಟೆಗೆ ಹೊಗಿ ನೋಡಿದ್ದಾಗ ಕಳ್ಳತನ ಆಗಿದ್ದು ಕಂಡು ಬಂತು. ನಮ್ಮ ಮನೆಯ ಬಾಗಿಲಿನ ಚಿಲಕ ಮುರಿದು ಆರೋಪಿಗಳು ಮನೆ ಒಳಗೆ ಹೋಗಿ ಕಪಾಟಿನಲ್ಲಿದ್ದ ಚಿನ್ನದ 2 ಚೈನು, 2 ಬಳೆಗಳು, 2 ಜೊತೆ ಕಿವಿಯೋಲೆಗಳು, 4 ಉಂಗುರ, ಪೆಂಡೆಂಟ್ ಸೇರಿ ಒಟ್ಟು 15 ಪವನ ಚಿನ್ನ ಕಳ್ಳತನವಾಗಿತ್ತು. ಜೂನ್-ಜುಲೈ 9ರಲ್ಲಿ ಕಳ್ಳತನವಾಗಿತ್ತು. ದೂರನ್ನು ನನ್ನ ಗಂಡ ಕೊಟ್ಟಿದ್ದರು.

1ವರೆ ವರ್ಷ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಚಿನ್ನದ ಒಡವೆಗಳು ಸಿಕ್ಕಿರುತ್ತವೆ. ನಮ್ಮ ಮನೆಯಲ್ಲಿ ಬಾಲಕೃಷ್ಣ ಮತ್ತು ಮುರುಗನ ಎಂಬುವವರು ಕಳ್ಳತನ ಮಾಡಿದ್ದ ವಿಚಾರ ಗೊತ್ತಾಯಿತು. ಇನ್ನೊಬ್ಬ ಆರೋಪಿ ಯಾರು ಅಂತ ಗೊತ್ತಾಗಿರಲಿಲ್ಲ. ಪೋಲೀಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ. ಈ ಕೇಸಿನ ಆರೋಪಿ ಮಡಸ್ವಾಮಿ ನೋಡಿದರೆ ಗುರುತಿಸಲು ಆಗುವುದಿಲ್ಲ .

ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಲಡಲಾಗಿಂದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.